# CHAMUNDESHWARI ELECTRICITY SUPPLY CORPORATION LIMITED

( AGOVT.ofkarnataka undertaking)

Corporate office address
No.29, KaveriGrameena Bank Road,
2nd Stage, Vijayanagara, Hinkal,
Mysore-570017. CIN:U40109KA2004SGC035177

Office of the Assistant Exe. Eng(E)
CESC, O&M,Sub-Division,
Saligrama.

TO NO:CESC/SLGR/AEE(E)/AE(T)/17-18/NO: 283-85 Date: 28/6/2017

ದಿನಾಂಕ; 20.06.2017ರಂದು ಶ್ರೀ. ಸನ್ಮಾನ್ಯ ನರಸಿಂಹೇಗೌಡ್ರು, ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರುರವರ ಅಧ್ಯಕ್ಷತೆಯಲ್ಲಿ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆಯನ್ನು ಸಾಲಿಗ್ರಾಮ ಉಪ ವಿಭಾಗ ಕಛೇರಿಯಲ್ಲಿ ನಡೆಸಲಾದ ಸಭೆಯ ನಡವಳಿಕೆಗಳು.

ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿ ಸಭೆಯನ್ನು ಬೆಳಿಗ್ಗೆ 11;00 ಕ್ಕೆ ಪ್ರಾರಂಭಿಸಿದರು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :

1. ಶ್ರೀ. ಬಸವಣ್ಣ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ), ವಿಭಾಗ, ಹುಣಸೂರು.
2. ಶ್ರೀ. ಸಿದ್ದಪ್ಪ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಪವಿಭಾಗ, ಸಾಲಿಗ್ರಾಮ,
3. ಶ್ರೀ ರಘುನಂದನ್ ಹೆಚ್. ಪಿ. ಸಹಾಯಕ ಇಂಜಿನಿಯರ್(ತಾಂ), ಸಾಲಿಗ್ರಾಮ ಉಪ ವಿಭಾಗ,
3. ಶ್ರೀ ಗೋವಿಂದಶೆಟ್ಟಿ, ಹಿರಿಯ ಸಹಾಯಕರು, ಕಂದಾಯ ಶಾಖೆ, ಸಾಲಿಗ್ರಾಮ ಉಪ ವಿಭಾಗ,
4. ಶ್ರೀ ಸುನೀಲ್ ಯಾದವ್, ಸಹಾಯಕ ಇಂಜಿನಿಯರ್(ವಿ), ಸಾಲಿಗ್ರಾಮ ಶಾಖೆ,
5. ಶ್ರೀ ಎಸ್. ಸುರೇಶ, ಕಿರಿಯ ಇಂಜಿನಿಯರ್ (ವಿ) ಭೇರ್ಯ ಶಾಖೆ,
6. ಶ್ರೀ ಶಿವಣ್ಣ, ಕಿರಿಯ ಇಂಜಿನಿಯರ್ (ವಿ) ಮಿರ್ಲೆ ಶಾಖೆ,

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಾರ್ವಜನಿಕರು ಹಾಗು ಚಿತ್ರೀಕರಣದ ಜೊತೆಯಲ್ಲಿ ಈ ಕೆಳಗಿನ ಸಾರ್ವಜನಿಕರ ಕುಂದು ಕೊರತೆಗಳನ್ನು ದಾಖಲೆ/ವಿಚಾರಿಸಲು ಚರ್ಚಿಸಲಾಯಿತು.

ಮುಂದುವರೆದಿದೆ,

ಸಭೆಯಲ್ಲಿ ಈ ಕೆಳಕಂಡ ಕುಂದು ಕೊರತೆಯನ್ನು ಗ್ರಾಹಕರಿಂದ/ಸಾರ್ವಜನೀಕರುಗಳಿಂದ ದೂರುಗಳನ್ನು/ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ.ಸ | ಅರ್ಜಿದಾರ ವಿಳಾಸ | ಮೊಬೈಲ್ ಸಂಖ್ಯೆ | ಗ್ರಾಮ | ಮನವಿಯ ವಿವರ | ಸಮಜಾಯಿಷಿ ಉತ್ತರ |
|---|---|---|---|---|---|
| 1 | ಶಂಕರ ಬಿನ್ ಶಿವಣ್ಣ | | ಹೊನ್ನೇನಹಳ್ಳಿ | ಸದರಿಯವರಿಗೆ ಬಸವ ಯೋಜನೆಯಡಿಯಲ್ಲಿ ಮನೆ ನಿರ್ಮಾಣ ಮಾಡಲಾಗಿದ್ದು ಈ ಮನೆಗೆ ಕಳೆದ 04 ವರ್ಷಗಳಿಂದ ವಿದ್ಯುತ್ ಸಂಪರ್ಕ ಇರುವುದಿಲ್ಲ ಹಾಗು ಈಮನೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು 02 ಕಂಬಗಳ ಅವಶ್ಯಕತೆಯಿರುತ್ತದೆ | ಸದರಿಯವರು ವಿದ್ಯುತ್ ಸಂಪರ್ಕಕ್ಕಾಗಿ ನಿಗಮದ ನಿಯಮಾನುಸಾರ ಅರ್ಜಿ ಸಲ್ಲಿಸುವಂತೆ ತಿಳಿಯಪಡಿಸಲಾಯಿತು. |
| 2 | ಆರ್. ಮಂಜುನಾಥ್ | 8277115658 | ಮಲುಗನಹಳ್ಳಿ | ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ನೀರಾವರಿ ಪಂಪ್ ಸೆಟ್ ಗೆ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ. | ಈಗಾಗಲೆ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಪರಿವರ್ತಕವನ್ನು ಅಳವಡಿಸಲು ವಿಭಾಗದ ಕಛೇರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು ಮಂಜೂರಾದ ಕೂಡಲೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಸಭೆಗೆ ಸಾಲಿಗ್ರಾಮ ಶಾಖಾಧಿಕಾರಿಗಳು ತಿಳಿಸಿದರು |
| 3 | ಕೃಷ್ಣನಾಯಕ | 9482705581 | ಮಲುಗನಹಳ್ಳಿ | ಶ್ರೀಯುತರ ವಿದ್ಯುತ್ ಸಂಪರ್ಕದ ಖಾತೆ ಸಂಖ್ಯೆ:**KRATL-32186** ರವರ ಮನೆಗೆ ಸೋಲಾರ್ ಲೈಟ್ ಗಳನ್ನು ಅಳವಡಿಸಿರುತ್ತಾರೆ ಆದರೂ ಸಹ ವಿದ್ಯುತ್ ಬಿಲ್ಲ್ ಹೆಚ್ಚಾಗಿ ಬರುತ್ತಿದೆ ಎಂದು ದೂರನ್ನು ನೀಡಿದರು | ಇವರ ಬಿಲ್ಲನ್ನು ಸಭೆಯಲ್ಲಿ ಪರಿಶೀಲನೆ ಮಾಡಿದಾಗ ಹಳೆ ಬಾಕಿ ಇರುವುದು ಕಂಡು ಬಂದಿರುತ್ತದೆ, ದೂರು ನೀಡಿದ ಗ್ರಾಹಕರಿಗೆ ವಿವರಣೆಯನ್ನು ನೀಡಿ ಹಳೆ ಬಾಕಿಯನ್ನು ಪಾವತಿಸಿದಲ್ಲಿ ಬಿಲ್ ಮೊತ್ತವು ಕಡಿಮೆ ಯಾಗುವುದು ಎಂದು ಮನವೊಲಿಸಲಾಯಿತು. |
| 4 | ಸಿಂಗ್ರಯ್ಯ | | ಲಕ್ಷ್ಮೀಪುರ | 3-4 ವರ್ಷದಿಂದ ಮನೆಗೆ ಕರೆಂಟ್ ಇರುವುದಿಲ್ಲವೆಂದು ಮನವಿ ಮಾಡಿರುತ್ತಾರೆ | ಸದರಿಯವರ ಮನವಿಯ ಮೇರೆಗೆ ಸಾಲಿಗ್ರಾಮ ಶಾಖಾಧಿಕಾರಿಗಳಿಗೆ ಕೂಡಲೆ ಸ್ಥಳ ಪರಿಶೀಲನಾ ವರದಿಯನ್ನು ನೀಡುವಂತೆ ನಿರ್ದೇಶನ ನೀಡಲಾಯಿತು. |
| 5 | ಶ್ಯಾಮ್ ಸುಂದರ್ ಬಿನ್ ಮಂಜುರಾಜ್ | 9480596208 | ಗುಳುವಿನತ್ತಿಗುಪ್ಪೆ | ಸದರಿಯವರು ತಮ್ಮ ಅಧಿಕೃತ ನೀರಾವರಿ ಪಂಪ್ ಸೆಟ್ ಗೆ ಈ ಹಿಂದೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಾಕಿದ್ದ ಪರಿವರ್ತಕದಿಂದ ವಿದ್ಯುತ್ ಸಂಪರ್ಕವನ್ನು ನೀಡಲಾಗಿತ್ತು, ಕಳೆದ 02 ವರ್ಷದಿಂದ ಈ ಗಂಗಾ ಕಲ್ಯಾಣ ಯೋಜನೆಯ ಗ್ರಾಹಕರು ನಮ್ಮ ವಿದ್ಯುತ್ ಸಂಪರ್ಕವನ್ನು ಕತ್ತರಿಸಿ ಹಾಕಿರುತ್ತಾರೆ. ಹಾಗು ಸದರಿ ರವರ ಮನೆಗೆ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ಹಾಲಿ ಇರುವ ಚಾಲ್ತಿಯಲ್ಲಿರುವ ಆರ್.ಆರ್. ಸಂಖ್ಯೆ **GAL-8** ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಂತೆ ಕೋರಿರುತ್ತಾರೆ. | ಸದರಿಯವರ ಮನವಿಯ ಮೇರೆಗೆ ಭೇರ್ಯ ಶಾಖಾಧಿಕಾರಿಗಳಿಗೆ ಕೂಡಲೆ ಸ್ಥಳ ಪರಿಶೀಲನೆ ಮಾಡಿ ವಿದ್ಯುತ್ ಸಂಪರ್ಕವನ್ನು ಅದೇ ಪರಿವರ್ತಕದ ಮೇಲೆ ಸಂಪರ್ಕವನ್ನು ನೀಡುವಂತೆ ನಿರ್ದೇಶನ ನೀಡಲಾಯಿತು. ಹಾಗು ಗೃಹ ಬಳಕೆಯ ಸ್ಥಾವರಕ್ಕೆ ನಿರಂತರ ಜ್ಯೋತಿ ಯೋಜನೆಯ ಮಾರ್ಗದಿಂದ ವಿದ್ಯುತ್ ಸಂಪರ್ಕವನ್ನು ಸ್ವಂತ ನಿರ್ವಹಣೆಯೋಜನೆಯಡಿಯಲ್ಲಿ ನಿರ್ವಹಿಸಿಕೊಳ್ಳುವಂತೆ ತಿಳಿಯಪಡಿಸಲಾಯಿತು. |
| 4 | ಎಸ್.ಆರ್. ಸತೀಶ | 9741320031 | ಸಾಲಿಗ್ರಾಮ | ಸಾಲಿಗ್ರಾಮದ ಕಳ್ಳೇಗೌಡ್ರು ಬೀದಿಯಲ್ಲಿ ಹಲವು ವರ್ಷಗಳಿಂದ ವೋಲ್ಟೇಜ್ ಸಮಸ್ಯೆಯಿಂದ ಸಾರ್ವಜನೀಕರಿಗೆ ತೊಂದರೆಯಾಗಿರುತ್ತದೆ. ಹಾಗು ಈ ವ್ಯಾಪ್ತಿಗೆ ಹೊಸದಾಗಿ ಪರಿವರ್ತಕವನ್ನು ಅಳವಡಿಸುವಂತೆ ಆಗ್ರಹಿಸಿದರು. | ಈ ವಿಚಾರವಾಗಿ ಸಾಲಿಗ್ರಾಮ ಶಾಖಾಧಿಕಾರಿಗಳಿಗೆ ತಿಳಿಸಿದಾಗ ಈ ವ್ಯಾಪ್ತಿಗೆ ಈಗಾಗಲೆ ಹೊಸದಾಗಿ ಪರಿವರ್ತಕವನ್ನು ಅಳವಡಿಸಲು ಕಂಬಗಳನ್ನು ಸ್ಥಳಕ್ಕೆ ಸಾಗಿಸಲಾಗಿರುತ್ತದೆ ಇನ್ನು ಮೂರು ತಿಂಗಳ ಒಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು. |

| | | | | | |
|---|---|---|---|---|---|
| 7 | ಎಸ್.ಎನ್. ಶಾಮಣ್ಣ | 9743803602 | ಸಾಲಿಗ್ರಾಮ (ಅಂಬೇಡ್ಕರ ನಗರ) | ಅಂಬೇಡ್ಕರ ನಗರ ವ್ಯಾಪ್ತಿಯ ಶಿರುವಿಹಾರದ ಬಳಿ ಶಿಥಿಲಗೊಂಡಿರುವ ಕಂಭಗಳನ್ನು ಬದಲಾಯಿಸುವಂತೆ ಆಗ್ರಹಿಸಿದರು ಮತ್ತು ಈ ಹಿಂದೆ ಇದ್ದ ಪ್ರಭಾರಿ ಶಾಖಾಧಿಕಾರಿಯಾದ ಶ್ರೀ ಡಿ.ಸಿ. ರವಿಕುಮಾರ್ ರವರು ಸದರಿಯವರ ಕೋರಿಕೆಗೆ ಸರಿಯಾಗಿ ಉತ್ತರಿಸದೆ ಉದ್ಧಟತನ ಮತ್ತು ಉಡಾಫೆಯಿಂದ ಉತ್ತರ ನೀಡಿದ್ದು ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. | ಸಾಲಿಗ್ರಾಮ ಶಾಖಾಧಿಕಾರಿಗಳಿಗೆ ಕೂಡಲೆ ಆ ವ್ಯಾಪ್ತಿಯ ಶಿಥಿಲಗೊಂಡ ಕಂಭಗಳನ್ನು ಬದಲಾಯಿಸುವಂತೆ ಮುಂದಿನ ಸಭೆಯ ಒಳಗಾಗಿ ಬದಲಾಯಿಸುವಂತೆ ಸೂಚಿಸಲಾಯಿತು ಮತ್ತು ಡಿ.ಸಿ. ರವಿಕುಮಾರ್ ಮೇಲೆ ಈ ವಿಚಾರವಾಗಿ ವರದಿ ನೀಡುವಂತೆ ಉಪ ವಿಭಾಗಾಧಿಕಾರಿಗಳಿಗೆ ಸೂಚಿಸಿದರು. |
| 8 | ಯೋಗಾನಂದ | 9845782830 | ಶೀಗೇವಾಳು | ಶೀಗೇವಾಳು ಗ್ರಾಮದಲ್ಲಿ ಈ ಹಿಂದೆ ಇದ್ದ 25 ಕೆವಿಎ ಪರಿವರ್ತಕದ ಮೇಲೆ 12 ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಸಂಪರ್ಕವನ್ನು ಅಧಿಕೃತವಾಗಿ ಪಡೆದುಕೊಂಡಿರುತ್ತಾರೆ. ಇದರಿಂದಾಗಿ ನಮಗೆ ವಿದ್ಯುತ್ ವೋಲ್ಟೇಜ್ ಸಮಸ್ಯೆಯಿಂದ ಪಂಪ್ ಸೆಟ್‌ಗಳು ಚಾಲನೆಗೊಳ್ಳುತ್ತಿರುವುದಿಲ್ಲ ಇದರಿಂದ ನಮ್ಮ ಬೆಳೆದ ಬೆಳೆಗಳು ಹಾಳಾಗುತ್ತಿರುತ್ತವೆ. ಈ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿದರು. | ಈ ವಿಚಾರವಾಗಿ ಸಾಲಿಗ್ರಾಮ ಶಾಖಾಧಿಕಾರಿಗಳಿಗೆ ತಿಳಿಸಿದಾಗ ಈ ವ್ಯಾಪ್ತಿಗೆ ಈಗಾಗಲೆ ಹೊಸದಾಗಿ ಪರಿವರ್ತಕವನ್ನು ಅಳವಡಿಸಲು ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ 02×25 ಕೆವಿಎ ಪರಿವರ್ತಕಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದ್ದು ಮುಂದಿನ 01 ತಿಂಗಳ ಒಳಗಾಗಿ ಪರಿವರ್ತಕವನ್ನು ಅಳವಡಿಸಿ ವೋಲ್ಟೇಜ್ ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ. |
| 9 | ಜವರಯ್ಯ | 8095459415 | ಮೇಲೂರು | ಮನೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕಂಭಗಳನ್ನು ತಂದು ಹಾಕಿ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲವೆಂದು ದೂರಿರುತ್ತಾರೆ | ಈ ವಿಚಾರವಾಗಿ ಬೇರ್ಯ ಶಾಖಾಧಿಕಾರಿಗಳನ್ನು ವಿಚಾರಿಸಿದಾಗ ಸದರಿಯವರು ಉಗ್ರಾಣದಲ್ಲಿ ವಾಹಕವು ಲಭ್ಯವಿಲ್ಲದೆ ಇರುವ ಕಾರಣದಿಂದ ಕಾಮಗಾರಿಯು ಸ್ಥಗಿತಗೊಂಡಿದ್ದು, ಹಾಲಿ ಈಗ ವಾಹಕವು ಉಗ್ರಾಣದಲ್ಲಿ ಲಭ್ಯವಿದ್ದು ಮುಂದಿನ 07 ದಿನಗಳ ಒಳಗಾಗಿ ವಿದ್ಯುತ್ ಸಂಪರ್ಕವನ್ನು ನೀಡುವುದಾಗಿ ತಿಳಿಸಿದರು. |

ಸಭೆಯಲ್ಲಿದ್ದ ಸಾರ್ವಜನೀಕರ ಮತ್ತು ಪತ್ರಕರ್ತರಿಗೆ ವಂದಿಸಿ ಮೇಲೆ ತಿಳಿಸಿರುವ ಎಲ್ಲಾ ಕುಂದು ಕೊರತೆಗಳನ್ನು ಮುಂದಿನ ಜನ ಸಂಪರ್ಕ ಸಭೆಯ ಒಳಗಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿ ಮತ್ತು ಆದ್ಯತೆ ಮೇರೆಗೆ ಕ್ರಮವಹಿಸುವಂತೆಯೂ ಸಂಬಂಧ ಪಟ್ಟ ಅಧಿಕಾರಿಗಳಿಗೆ ಪ್ರತೀ ದಿನ ಈ ಸಂಬಂಧ ಪರಾಮರ್ಶಿಸುವಂತೆ ಸೂಚಿಸಿ ಸಭೆಯನ್ನು ಮಧ್ಯಾಹ್ನ 02:30 ಕ್ಕೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)

ಉಪ ವಿಭಾಗ, ಸೆಸ್ಕ್, ಸಾಲಿಗ್ರಾಮ.

ಪ್ರತಿಯನ್ನು ತಮ್ಮ ಆದ್ಯ ಗಮನಕ್ಕೆ ಸಲ್ಲಿಸಲಾಗಿದೆ:-

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ವಲಯ, ಚಾವಿಸನಿನಿ, ಮೈಸೂರುರವರ ಆದ್ಯ ಗಮನಕ್ಕಾಗಿ

2. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ, ವೃತ್ತ, ಸೆಸ್ಕ್, ಮೈಸೂರುರವರ ಆದ್ಯ ಗಮನಕ್ಕಾಗಿ.

3. ಕಾರ್ಯಪಾಲಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಸೆಸ್ಕ್, ಹುಣಸೂರುರವರ ಆದ್ಯಗಮನಕ್ಕಾಗಿ.

ಪ್ರತಿಗಳನ್ನು:-

## ...ಡನಾಡಿಯಲ್ಲಿ ...ಸ್ಯದ ಹೊನಲು

# ಸಕಾಲದಲ್ಲಿ ರೈತರ ಅರ್ಜಿ ವಿಲೇಗೆ ಸಲಹೆ

■ ವಿಕ ಸುದ್ದಿಲೋಕ ಸಾಲಿಗ್ರಾಮ

ವಿದ್ಯುತ್ ಸಂಪರ್ಕವಿಲ್ಲದ ಬಿಪಿಎಲ್ ಕುಟುಂಬಗಳಿಗೆ ಕೇಂದ್ರ ಸರಕಾರದ ದೀನ್ ದಯಾಳ್ ಉಪಾಧ್ಯಾಯ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸೆಸ್ಕ್ ಮೈಸೂರು ವೃತ್ತದ ಅಧೀಕ್ಷಕ ಅಭಿಯಂತರ ನರಸಿಂಹೇಗೌಡ ಸೂಚನೆ ನೀಡಿದರು.

ಪಟ್ಟಣದ ಸೆಸ್ಕ್ ಉಪವಿಭಾಗ ಕಚೇರಿಯ ಆವರಣದಲ್ಲಿ ಮಂಗಳವಾರ ನಡೆದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರಿಂದ ಅಹವಾಲು ಆಲಿಸಿ ಮಾತನಾಡಿದರು. ಕೃಷಿ ಪಂಪ್‌ಸೆಟ್‌ಗಳಿಗೆ ಹಾಗೂ ನಿರಂತರ ಜ್ಯೋತಿ ಯೋಜನೆಯಡಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ಅಧಿಕಾರಿಗಳಿಗೆ ತಾಕೀತು ಮಾಡಿದರು. ರೈತರಿಂದ ಬರುವ ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಿ ವಿದ್ಯುತ್ ಪರಿವರ್ತಕಗಳು ಹಾಗೂ ಇಲಾಖೆಯಿಂದ ಸಿಗುವ ಇತರೆ ಸವಲತ್ತುಗಳನ್ನು ಕಾಲಮಿತಿಯೊಳಗೆ ಕಲ್ಪಿಸಲು ಸೂಚಿಸಿದರು.

ತೋಟದ ಮನೆಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್



ವಿಕ ಚಿತ್ರಲೋಕ

ಸಾಲಿಗ್ರಾಮ ಸೆಸ್ಕ್ ಉಪವಿಭಾಗ ಕಚೇರಿ ಆವರಣದಲ್ಲಿ ಮಂಗಳವಾರ ನಡೆದ ಜನಸಂಪರ್ಕ ಸಭೆಯನ್ನು ಸೆಸ್ಕ್ ಅಧೀಕ್ಷಕ ಅಭಿಯಂತರ ನರಸಿಂಹೇಗೌಡ ಉದ್ಘಾಟಿಸಿದರು.

ಸಂಪರ್ಕ ಪಡೆಯಲು ಗ್ರಾಹಕರು ಪೂರ್ಣ ವೆಚ್ಚ ಭರಿಸಬೇಕು. ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುವ ಫಲಾನುಭವಿಗಳು ತಮ್ಮ ವಿದ್ಯುತ್ ಪರಿವರ್ತಕಗಳಿಂದ ಅಕ್ಕಪಕ್ಕದ ಇತರೆ ಕೃಷಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ನೀಡುವುದಕ್ಕೆ ಅಧಿಕಾರಿಗಳಿಗೆ ಅಡ್ಡಿಪಡಿಸಬಾರದು ಎಂದು ಮನವಿ ಮಾಡಿದರು. ಮನೆಗಳಿಗೆ ಕಾರಣಾಂತರದಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅರ್ಜಿದಾರರಿಗೆ ನಿಯಮಾನುಸಾರ ಮತ್ತೆ ಸಂಪರ್ಕ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಸ್ವೀಕಾರವಾದ ಗ್ರಾಹಕರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಿ ಸಮಸ್ಯೆ ನಿವಾರಣೆ ಮಾಡಬೇಕು ಎಂದರು.

ಹುಣಸೂರು ಸೆಸ್ಕ್ ವಿಭಾಗದ ಇಇ ಬಸವಣ್ಣ, ಸಾಲಿಗ್ರಾಮ ಸೆಸ್ಕ್ ಉಪವಿಭಾಗದ ಎಇಇ ಸಿದ್ದಪ್ಪ, ಎಇ ಸುನೀಲ್ ಯಾದವ್, ರಘುನಂದನ್, ಕಿರಿಯ ಇಂಜಿನಿಯರ್ ಎನ್. ಸುರೇಶ್, ಶಿವಣ್ಣ ಇದ್ದರು.